**For Immediate Release:**
30 March 2015

**Contact:**
Dr. Manilal Valliyate +919910817382; ManilalV@petaindia.org
Sachin Bangera +91 9820122561; SachinB@petaindia.org

# ಕರ್ನಾಟಕ ರಾಜ್ಯವು ಹೋರಿಗಳ ಸಂತಾನಹರಣವನ್ನು ನೋವುರಹಿತ ಮಾಡಲಿದೆ

**ಪೀಟಾ ವರದಿ ಮತ್ತು ಭಾರತದ ಪ್ರಾಣಿ ಹಿತರಕ್ಷಣಾ ಮಂಡಳಿಯು ಕಾರ್ಯವಿಧಾನಕ್ಕೆ ಮುನ್ನ ಕಡ್ಡಾಯ ಅರಿವಳಿಕೆ ನೀಡಲು ಆದೇಶಿಸಿದೆ.**

ಬೆಂಗಳೂರು ಚೇರ್‌ಮನ್ ಮೇಜರ್ ಜನರಲ್ (ನಿವೃತ್ತ) ಡಾ. ಆರ್ ಎಂ ಖರ್ಬ್, ಮತ್ತು ಭಾರತದ ಪ್ರಾಣಿ ಹಿತರಕ್ಷಣಾ ಮಂಡಳಿಯ ಇತರ ಸದಸ್ಯರಾದ ಸೌಮ್ಯ ರೆಡ್ಡಿ, ಜಯಸಿಂಹ ಮತ್ತು ಗೌರಿ ಮೌಲೇಖಿ ಅವರೊಂದಿಗೆ ಪಶುಸಂಗೋಪನಾ ಅಧಿಕಾರಿಗಳ ಸಭೆಯ ನಂತರ ಕರ್ನಾಟಕ ರಾಜ್ಯದ ಪಶುಸಂಗೋಪನಾ ಇಲಾಖೆಯು ಹೋರಿಗಳ ಸಂತಾನಹಣದ ಕಾರ್ಯವಿಧಾನಗಳ ವೇಳೆ ಕಡ್ಡಾಯ ಅರಿವಳಿಕೆಗಾಗಿ ಆದೇಶವನ್ನು ನೀಡಿತು. ಪೀಟಾ ಭಾರತ ಮತ್ತು ಎಡಬ್ಲ್ಯುಬಿಐ ಅವರಿಂದ ವಿಚಾರಣೆ ದೊರೆತ ಮೇಲೆ, ಡಿಸೆಂಬರ್ 2014 ರಲ್ಲಿ ಭಾರತದಲ್ಲಿ ಅತ್ಯುನ್ನತ ಪಶುಸಂಗೋಪನೆ ಪ್ರಾಧಿಕಾರವು – ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಯ ಆಯುಕ್ತರು  ಎಲ್ಲ ರಾಜ್ಯಗಳು ಸಂತಾನಹರಣದ ಮುನ್ನ ಅರಿವಳಿಕೆ ಒದಗಿಸಬೇಕೆಂದು ಶಿಫಾರಸು ಮಾಡಿದ ಹಿನ್ನೆಲೆಯಲ್ಲಿ ತೆಗೆದುಕೊಂಡ ನಿರ್ಧಾರದ ನಂತರ ಈ ಆದೇಶವನ್ನು ನೀಡಲಾಗಿದೆ.

ಪೀಟಾ ಭಾರತದ ಪಶುವೈದ್ಯಕೀಯ ಪ್ರೊಜೆಕ್ಟ್‌ಗಳ ವರಿಷ್ಠ ಪ್ರಬಂಧಕರಾದ ಡಾ ಆಶೀಶ್ ಸುತಾರ್ ಹೇಳುತ್ತಾರೆ, ‘‘ಮಾನವ ಪುರುಷರಂತೆಯೇ ಹೋರಿಗಳು ಮತ್ತು ಅನ್ಯ ಪ್ರಾಣಿಗಳಿಗೆ ಸಂತಾನಹರಣವು ನೋವುದಾಯಕ ಹಾಗೂ ಒತ್ತಡ ಪರಿಸ್ಥಿತಿಯಾಗಿರುತ್ತದೆ’’ ‘‘ಪ್ರಾಣಿಗಳು ಸಾಧ್ಯವಾದಷ್ಟೂ ಕಡಿಮೆ ಅನುಭವಿಸುವುವೆಂಬುದನ್ನು ಖಚಿತಪಡಿಸಿಕೊಳ್ಳಲು ಕರ್ನಾಟಕವು ಒಂದು ಮುಖ್ಯ ಹೆಜ್ಜೆಯನ್ನು ತೆಗೆದುಕೊಂಡಿದೆ ಮತ್ತು ಪೀಟಾ ಭಾರತವು ಇತರ ರಾಜ್ಯಗಳೂ ಹೀಗೆಯೇ ಮಾಡಲು ಕರೆ ನೀಡುತ್ತಿದೆ.’’

**ಆಂಧ್ರಪ್ರದೇಶ** ಮತ್ತು **ಕೇರಳದ** ನಂತರ, ಭಾರತದಲ್ಲಿ ಕರ್ನಾಟಕವು ನೋವುರಹಿತ ಸಂತಾನಹರಣದ ಪರವಾಗಿ ರಾಜ್ಯದಾದ್ಯಂತ ಸುತ್ತೋಲೆ ನೀಡುವ ಮೂರನೇ ರಾಜ್ಯವಾಗಿದೆ. ಹಳೆಯ ಸಂತಾನಹರಣದ ಕಾರ್ಯವಿಧಾನವು–ಇದರಲ್ಲಿ ಹೋರಿಗಳನ್ನು ಬಲವಂತವಾಗಿ ನೆಲದ ಮೇಲೆ ಬೀಳಿಸಿ, ಜನನಾಂಗಗಳಿಗೆ ಸಂಪರ್ಕಗೊಂಡಿರುವ ರಕ್ತನಾಳಗಳನ್ನು, ನರಗಳನ್ನು ಮತ್ತು ಅಂಗಾಂಶಗಳನ್ನು ಜಜ್ಜಲಾಗುವುದು–ಪ್ರಾಣಿಗಳಿಗೆ ಭಯಾನಕ ಹಾಗೂ ಅತ್ಯಂತ ನೋವುದಾಯಕವಾಗಿದ್ದು, ಕಾರ್ಯವಿಧಾನದ ನಂತರ ಸಾಮಾನ್ಯವಾಗಿ ಪ್ರಾಣಿಗಳು ಹಲವಾರು ವಾರಗಳ ಕಾಲ ನೋವನ್ನು ಅನುಭವಿಸುತ್ತಿರುತ್ತವೆ. ಸಂತಾನಹರಣದ ಸಮಯದಲ್ಲಿ ಭಯ ಮತ್ತು ನೋವನ್ನು ತೊಡೆದುಹಾಕುವ ಸಲುವಾಗಿ ಪಶುವೈದ್ಯರು ಔಷಧಿಗಳನ್ನು ಬಳಸುವುದನ್ನು ಈ ಹೊಸ ಸುತ್ತೋಲೆಯು ಅಗತ್ಯಪಡಿಸುತ್ತದೆ. ಪೀಟಾ ಭಾರತ, ಅದರ ಧ್ಯೇಯವು, ‘‘ಪ್ರಾಣಿಗಳನ್ನು ಯಾವುದೇ ರೀತಿಯಲ್ಲಿ ನಿಂದನೆಗೆ ಗುರಿಪಡಿಸಬಾರದು’’ ಎಂದು ಹೇಳುತ್ತಿದ್ದು, ನೋವು ಹಾಗೂ ಒತ್ತಡವನ್ನು ಕನಿಷ್ಠಗೊಳಿಸುವ ಸಲುವಾಗಿ ಪ್ರಾಣಿಗಳು 6 ತಿಂಗಳು ಅಥವಾ ಕಡಿಮೆ ವಯಸ್ಸಿನವಿರುವಾಗ ಸಂತಾನಹರಣವನ್ನು ಮಾಡಬೇಕೆಂದು ಮುಂದೆ ಶಿಫಾರಸು ಮಾಡುತ್ತದೆ.

ಅಧಿಕ ಮಾಹಿತಿಗಾಗಿ, ದಯವಿಟ್ಟು **PETAIndia.com**.ಗೆ ಭೇಟಿ ನೀಡಿ.

#

PEOPLE FOR
THE ETHICAL
TREATMENT
OF ANIMALS

PETA India
PO Box 28260
Juhu, Mumbai
400 049
(22) 4072 7382
(22) 2636 7383 (fax)

Info@petaindia.org
PETAIndia.com

**NEWS RELEASE**

Affiliates:
- PETA US
- PETA Asia
- PETA Australia
- PETA Germany
- PETA Netherlands
- PETA Foundation (UK)

Registered Office:
14 Doctor Lane
Classic House, Gole Market
New Delhi
110 001

CIN: U74899DL2000NPL103217